**OS.No**.26/2018 **PW**-1

**ದಿನಾಂಕಃ 23.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲು 2ನೇ ಪ್ರತಿವಾದಿ ಪರ ಶ್ರೀ. ಬಿ.ಎ.ಪಿ. ವಕೀಲರಿಂದ

ನಾನು ಈ ದಾವೆಯನ್ನು ಹಣ ಕೊಡಿಸಬೇಕು ಎಂದು ಹಾಕಿದ್ದೇನೆ. ನಾನು ಈ ಪ್ರಕರಣವನ್ನು ನನ್ನ ಗಂಡ ಮತ್ತು ನನ್ನ ಮಾವನ ವಿರುದ್ಧ ಹಾಕಿದ್ದೇನೆ. ನನ್ನ ಮಾವ ರುದ್ರೇಗೌಡರಿಗೆ ಇಬ್ಬರು ಗಂಡು ಮಕ್ಕಳು, ಅವರ ಪೈಕಿ ಒಬ್ಬರು ತೀರಿಕೊಂಡಿರುತ್ತಾರೆ. ರುದ್ರೇಗೌಡರಿಗೆ ಮೂರು ಜನ ಅಕ್ಕತಂಗಿಯರು, ಇಬ್ಬರು ಅಣ್ಣತಮ್ಮಂದಿರು ಇರುತ್ತಾರೆ. ಈ ಪ್ರಕರಣದಲ್ಲಿ ನಾನು ರುದ್ರೇಗೌಡರ ಇಬ್ಬರು ಸಹೋದರಿಯರನ್ನು ಮಾತ್ರ ಪ್ರತಿವಾದಿ ನಂ.3 ಮತ್ತು 4 ಎಂದು ಸೇರಿಸಿರತ್ತೇನೆ ಎಂದರೆ ಸರಿ. ರುದ್ರೇಗೌಡರ ಅಣ್ಣ ತಮ್ಮಂ ದಿರನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ರುದ್ರೇಗೌಡರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು, ನನ್ನ ಮಾವ ರುದ್ರೇಗೌಡ ಹಾಗೂ 2ನೇ ಪ್ರತಿವಾದಿ ಒಟ್ಟಿಗೆ ವಾಸವಾಗಿದ್ದೇವೆ ಎಂದರೆ ಸರಿಯಲ್ಲ. ನಾನು ಹರಿಹರಪುರದಲ್ಲಿ ವಾಸವಾಗಿದ್ದೇನೆ. ಹರಿಹರಪುರದಲ್ಲಿ ನಾನು ಮೊದಲು ಬಾಡಿಗೆ ಮನೆಯಲ್ಲಿ ವಾಸವಾಗಿದ್ದೆ, ಈಗ 3 ತಿಂಗಳ ಹಿಂದೆ ನನ್ನ ಗಂಡ ಅವರ ಮನೆಯಲ್ಲಿ ಕೊಟ್ಟಿಗೆ ಕೊಟ್ಟಿದ್ದು, ಅದರಲ್ಲಿಯೇ ವಾಸವಾಗಿದ್ದೇನೆ.

ನಾನು 3 ವರ್ಷಗಳಿಂದ ಬೇರೆಯಾಗಿ ವಾಸವಾಗಿದ್ದೇನೆ. ಈ ಪ್ರಕರಣ ದಾಖಲು ಮಾಡಿದಾಗ ನಾನು 2ನೇ ಪ್ರತಿವಾದಿಯೊಂದಿಗೆ ವಾಸವಾಗಿದ್ದೆ ಎಂದರೆ ಸರಿಯಲ್ಲ. ನಾನು 2ನೇ

ಪ್ರತಿವಾದಿಯೊಂದಿಗೆ ವಾಸವಾಗಿದ್ದು, ಅವರೇ ನನ್ನ ಕಷ್ಟ ಸುಖ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಪ್ರಕರಣವನ್ನು ನಾನು ಹಾಗೂ ನನ್ನ ಮಕ್ಕಳು ಸೇರಿ ಹಾಕಿರುತ್ತೇವೆ.

ಈ ಪ್ರಕರಣದ 2ನೇ ಪ್ರತಿವಾದಿ ನನ್ನ ಗಂಡ ಎಂದರೆ ಸರಿ. ಅವರು ಜೀವಂತವಾಗಿದ್ದಾರೆ ಎಂದರೆ ಸರಿ. ಈ ದಿನ ನ್ಯಾಯಾಲಯದ ಮುಂದೆ ಇರುವ ವ್ಯಕ್ತಿಯೇ ನನ್ನ ಗಂಡ ಎಂದರೆ ಸರಿ. 3 ಆಸ್ತಿಗಳ ಮೇಲೆ ನಾನು ಈ ಪ್ರಕರಣವನ್ನು ದಾಖಲು ಮಾಡಿದ್ದೇನೆ.

ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.